ಕರ್ನಾಟಕ ವಿಧಾನಸಭೆ
ಹದಿನಾರನೇ ವಿಧಾನಸಭೆ
ಮೂರನೇ ಅಧಿವೇಶನ

# ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–18)**

ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪೊಲೀಸು (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು;

**2. ಪ್ರಕರಣ 20-ಎಫ್ ನ ತಿದ್ದುಪಡಿ.-** ಕರ್ನಾಟಕ ಪೊಲೀಸು ಅಧಿನಿಯಮ 1963ರ (1964ರ ಕರ್ನಾಟಕ ಅಧಿನಿಯಮ 4) 20-ಎಫ್ ಪ್ರಕರಣದಲ್ಲಿ ,-

(1) "ಒಂದು ವರ್ಷ" ಎಂಬ ಪದಗಳ ಬದಲಾಗಿ "ಎರಡು ವರ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) ಉಪಪ್ರಕರಣ (2)ರಲ್ಲಿ,-

(i) "ಹೆಚ್ಚುವರಿ ಪೊಲೀಸ್ ಸೂಪರಿಂಟೆಂಡೆಂಟ್ ಸೇರಿದಂತೆ ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸ್ ಸೂಪರಿಂಟೆಂಡೆಂಟರು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂಥ ಕ್ಷೇತ್ರದಲ್ಲಿನ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳಲ್ಲಿ ನಿರತರಾಗಿರುವ ಹೆಚ್ಚುವರಿ ಪೊಲೀಸ್ ಸೂಪರಿಂಟೆಂಡೆಂಟ್ ಸೇರಿದಂತೆ ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸ್ ಸೂಪರಿಂಟೆಂಡೆಂಟರು ಕನಿಷ್ಠ ಎರಡು ವರ್ಷಗಳ ಅವಧಿಯನ್ನು ಹೊಂದಿರತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕಾರ್ಯಾಚರಣೆ ಕರ್ತವ್ಯದಲ್ಲಿರುವ ಪೊಲೀಸ್ ಅಧಿಕಾರಿಗಳ ಕನಿಷ್ಟ ಅವಧಿಯನ್ನು ಒಂದು ವರ್ಷದಿಂದ ಎರಡು ವರ್ಷಗಳಿಗೆ ವಿಸ್ತರಿಸುವುದರಿಂದ ಪೊಲೀಸ್ ಅಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳಲು, ಸಾರ್ವಜನಿಕರೊಂದಿಗೆ ಉತ್ತಮ ಭಾಂದವ್ಯ ನಿರ್ಮಿಸಲು, ಅಪರಾಧವನ್ನು ಪತ್ತೆ ಹಚ್ಚಲು ಮತ್ತು ತಡೆಯಲು ಸಹಕಾರಿಯಾಗುತ್ತದೆ. ಆದ್ದರಿಂದ ಕಾರ್ಯಾಚರಣೆ ಕರ್ತವ್ಯದಲ್ಲಿರುವ ಪೊಲೀಸ್ ಅಧಿಕಾರಿಗಳ ಕನಿಷ್ಟ ಅವಧಿಯನ್ನು ಒಂದು ವರ್ಷದಿಂದ ಎರಡು ವರ್ಷಗಳಿಗೆ ವಿಸ್ತರಿಸಲು ಕರ್ನಾಟಕ ಪೊಲೀಸ್ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಾ.ಜಿ.ಪರಮೇಶ್ವರ**
ಗೃಹ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಪೊಲೀಸು ಅಧಿನಿಯಮ, 1963ರ**
**(1964 ರ ಅಧಿನಿಯಮ ಸಂಖ್ಯೆ. 4) ಉದ್ಧೃತ ಭಾಗ**

**XX XX XX**

**20ಎಫ್. ಪೊಲೀಸ್ ಠಾಣೆಗಳು, ವೃತ್ತ, ಉಪ-ವಿಭಾಗ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರಾವಧಿ.-**(1) ವಯೋನಿವೃತ್ತಿಗಳೊಪಟ್ಟು, ಕಾಲಕಾಲಕ್ಕೆ ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು, ಕನಿಷ್ಠ ಒಂದು ವರ್ಷದ ಅಧಿಕಾರಾವಧಿಯನ್ನು ಹೊಂದಿರತಕ್ಕದ್ದು:

ಪರಂತು, ಪೊಲೀಸ್ ಸಿಬ್ಬಂದಿ ಮಂಡಲಿ ಅಥವಾ ಸರ್ಕಾರವು ಸಂದರ್ಭಾನುಸಾರ ಯಾರೇ ಅಧಿಕಾರಿಯನ್ನು,-

(ಎ) ಉನ್ನತ ಹುದ್ದೆಗೆ ಬಡ್ತಿ ಹೊಂದಿದಲ್ಲಿ; ಅಥವಾ

(ಬಿ) ಕ್ರಿಮಿನಲ್ ಅಪರಾಧದಲ್ಲಿ ನ್ಯಾಯಾಲಯದಿಂದ ಅಪರಾಧ ನಿರ್ಣೀತನಾಗಿದ್ದಲ್ಲಿ ಅಥವಾ ದೋಷಾರೋಪಣೆಗಳನ್ನು ಹೊರಿಸಲಾಗಿದ್ದಲ್ಲಿ; ಅಥವಾ

(ಸಿ) ಸೇವೆಯಿಂದ ವಜಾ ಮಾಡುವ, ತೆಗೆದುಹಾಕುವ, ಬಿಡುಗಡೆಗೊಳಿಸುವ ಅಥವಾ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿದಲ್ಲಿ ಅಥವಾ ಸಂಬಂಧಪಟ್ಟ ಶಿಸ್ತು ಪಾಲನಾ ಮತ್ತು ಅಪೀಲು ನಿಯಮಗಳ ಮೇರೆಗೆ ಕೆಳಗಿನ ದರ್ಜೆಗಿಳಿಸಿದ್ದಲ್ಲಿ; ಅಥವಾ

(ಡಿ) ಸದರಿ ನಿಯಮಗಳ ಉಪಬಂಧಗಳಿಗನುಸಾರವಾಗಿ ಸೇವೆಯಿಂದ ಅಮಾನತುಗೊಳಿಸಿದ್ದಲ್ಲಿ; ಅಥವಾ

(ಇ) ತನ್ನ ಪ್ರಕಾರ್ಯಗಳು ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ಅಸಮರ್ಥತೆ ಹೊಂದಿದ್ದಲ್ಲಿ ದೈಹಿಕ ಅಥವಾ ಮಾನಸಿಕ ಅಸ್ವಸ್ಥತೆಯಿಂದ ಅನ್ಯಥಾ ಅಸಮರ್ಥತೆಯನ್ನು ಹೊಂದಿದ್ದಲ್ಲಿ; ಅಥವಾ

(ಎಫ್) ಬಡ್ತಿ, ವರ್ಗಾವಣೆ ಅಥವಾ ನಿವೃತ್ತಿಯ ಮೂಲಕ ಉಂಟಾದ ಖಾಲಿಸ್ಥಾನವನ್ನು ಭರ್ತಿ ಮಾಡುವ ಅಗತ್ಯವಿದ್ದಲ್ಲಿ; ಅಥವಾ

(ಜಿ) ಲಿಖಿತದಲ್ಲಿ ಸಂಬಂಧಪಟ್ಟ ಅಧಿಕಾರಿಯ ಕೋರಿಕೆಯ ಮೇಲೆ,

-ಕನಿಷ್ಠ ಅಧಿಕಾರಾವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಆತನ ಹುದ್ದೆಯಿಂದ ವರ್ಗಾವಣೆ ಮಾಡಬಹುದಾಗಿದೆ:

ಮತ್ತೂ ಪರಂತು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿನ ದುರ್ನಡತೆ ಅಥವಾ ಸಂಪೂರ್ಣ ನಿರ್ಲಕ್ಷತೆ ಅಥವಾ ನೈತಿಕ ಅಧಃಪತನದ ಕೃತ್ಯದ ಕಾರಣದಿಂದಾಗಿ ತನ್ನ ಕನಿಷ್ಠ ಅವಧಿಯ ಮುಕ್ತಾಯಕ್ಕೆ ಮುಂಚೆ ಸರ್ಕಾರವು ಅಂಥ ಅಧಿಕಾರಿಯ ವರ್ಗಾವಣೆ ಮಾಡಬಹುದಾಗಿದೆ.

(2) ವಯೋನಿವೃತ್ತಿಗಳೊಪಟ್ಟು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ವಲಯದ ಪ್ರಭಾರದಲ್ಲಿರುವ ಪೊಲೀಸ್ ಮಹಾ ನಿರೀಕ್ಷಕರು ಅಥವಾ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂಥ ಕ್ಷೇತ್ರದಲ್ಲಿನ ಕಾರ್ಯಾಚರಣೆ ಕರ್ತವ್ಯಗಳು ಮತ್ತು ಅಂಥ ಇತರೆ ಕರ್ತವ್ಯಗಳಲ್ಲಿ ನಿರತರಾಗಿರುವ ಹೆಚ್ಚುವರಿ ಪೊಲೀಸ್ ಸೂಪರಿಂಟೆಂಡೆಂಟ್ ಸೇರಿದಂತೆ ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸ್ ಸೂಪರಿಂಟೆಂಡೆಂಟರು ಕನಿಷ್ಠ ಒಂದು ವರ್ಷದ ಅವಧಿಯನ್ನು ಹೊಂದಿರತಕ್ಕದ್ದು:

ಪರಂತು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅಥವಾ (1)ನೇ ಉಪ-ಪ್ರಕರಣದ ಪರಂತುಕದಲ್ಲಿ ನಿರ್ದಿಷ್ಟಪಡಿಸಿರುವ ಸನ್ನಿವೇಶಗಳ ಮೇರೆಗೆ ಒಟ್ಟಾರೆ ದುರ್ನಡತೆ ಅಥವಾ ನಿರ್ಲಕ್ಷತೆ, ನೈತಿಕ ಅಧಃಪತನದ ಕೃತ್ಯದ ಕಾರಣಗಳಿಗಾಗಿ ಸರ್ಕಾರವು, ಒಂದು ವರ್ಷದ ಅವಧಿಯ ಒಳಗೆ ಅಂತಹ ಅಧಿಕಾರಿಯನ್ನು ವರ್ಗಾವಣೆ ಮಾಡಬಹುದು

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 19ನೇ ಫೆಬ್ರವರಿ 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**THIRD SESSION**

# THE KARNATAKA POLICE (AMENDMENT) BILL, 2024
## (LA Bill No. 18 of 2024)

A Bill further to amend the Karnataka Police Act, 1963.

Whereas it is expedient further to amend the Karnataka Police Act, 1963 (Karnataka Act 4 of 1964), for the purpose hereinafter appearing:

Be it enacted by the Karnataka State Legislature in the Seventy fifth year of the Republic of India as follows:-

**1. Short title and commencement.-** (1) This Act may be called the Karnataka Police (Amendment) Act, 2024.

(2) It shall come into force at once.

**2. Amendment of Section 20-F.-** In section 20-F of the Karnataka Police Act, 1963 (Karnataka Act 04 of 1964),-

(1) in sub-section (1), for the words “one year:” the words “two years:” shall be substituted.

(2) In sub-section (2),-

(i) the words “or Superintendent of Police in charge of a District including Additional Superintendent of Police” shall be omitted; and

(ii) the following shall be inserted at the end, namely:-

“and Superintendent of police in charge of District including Additional superintendent of police who are on operational duties in the field or such other duties as may be notified by the Government from time to time shall have a minimum tenure of two years”.

## STATEMENT OF OBJECTS AND REASONS

It is considered necessary further to amend the Karnataka Police Act, 1963 (Karnataka Act 4 of 1964) to enhance minimum tenure of police officers in operational duties from one year to two years. This will help the Police Officer; to understand the jurisdiction in a better manner; to build good relation with the public; in detection and prevention of crime.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**Dr. G. PARAMESHWARA**
Minister for Home

**M.K. VISHALAKSHI**
Secretary
Karnataka Legislative Assembly

## ANNEXURE
## Extract from the Karnataka Police Act, 1963
## (Karnataka Act 4 of 1964)

**XXX XXX XXX**

## CHAPTER IIA

**20F.Tenure of officers incharge of police stations, circle, sub-division, district and range.–** (1) Subject to superannuation, the officers who are in operational duties or such other duties as may be notified by the Government from time to time shall have a minimum tenure of one year:

**XXX XXX XXX**

Provided that any such officer may be transferred by the Police Establishment Board or by the Government as the case may be from his post before the expiry of the minimum tenure consequent upon,-

(a) promotion to a higher post; or

(b) on conviction, or charges having been framed by a court of Law in a criminal offence; or

(c) imposition of punishment of dismissal, removal, discharge or compulsory retirement from service or of reduction to a lower rank awarded under the relevant discipline and appeal rules; or

(d) suspension from the service in accordance with the provisions of the said rules; or

(e) incapacitation by physical or mental illness or otherwise becoming unable to discharge his functions and duties; or

(f) the need to fill up a vacancy caused by promotion, transfer or retirement; or

(g) on request of the officer concerned in writing:

Provided further that the Government may, transfer an officer before the expiry of his minimum tenure on account of misconduct or gross negligence or an act of moral turpitude in the opinion of the State Government.

(2) Subject to superannuation, the Additional Director General of Police, the Inspector General of Police in charge of Range or Superintendent of Police in charge of a District including Additional Superintendent of Police who are on operational duties in the field or such other duties as may be notified by the Government from time to time shall have a minimum tenure of one year:

Provided that the Government may transfer such officer within a period of one year for reasons of gross misconduct or negligence or an act of moral turpitude in the opinion of the State Government or under circumstances specified in the provisos to sub-section (1).

**XXX XXX XXX**

Govt. Press, Vikasa Soudha, Bengaluru, 19th Feb, 2024, P7, W.D. , Copies 500